**<u>ಸಾಕ್ಷಿಗೆ ದಿಃ 12.06.2025 ರಂದು ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ವಿ ಸಿ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಶಪಥ ಪತ್ರದ ಮುಖಾಂತರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸರಿ ಇರುತ್ತದೆ. ಈಗ ನಾನು ನಿಪಿ-1 ಮೃತ್ಯು ಪತ್ರವನ್ನು ನೋಡುತ್ತಿದ್ದು ಸದರಿ ಮೃತ್ಯು ಪತ್ರವನ್ನು ಶ್ರೀಮತಿ ಅಕ್ಕಮ್ಮ ಇವರು ತಿಮ್ಮರಾಯಪ್ಪರವರಿಗೆ ಬರೆದು ಹೆಬ್ಬೆಟ್ಟಿನ ಸಹಿ ಮಾಡಿ ಕೊಡುವಾಗ ನಾನು ಮತ್ತು ಸುನೀಲ್ ಹಾಜರಿದ್ದೆವು. ಸದರಿ ಮೃತ್ಯು ಪತ್ರದಲ್ಲಿ ಶ್ರೀಮತಿ ಅಕ್ಕಮ್ಮ ಹೆಬ್ಬೆಟ್ಟಿನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸುನೀಲ್ ಇವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ಅಕ್ಕಮ್ಮ ಇವರು ನನ್ನ ಹಾಗೂ ಸುನೀಲ್ ಇವರ ಸಮಕ್ಷಮ ನಿಪಿ-1 ಮೃತ್ಯು ಪತ್ರಕ್ಕೆ ಹೆಬ್ಬೆಟ್ಟಿನ ಸಹಿ ಮಾಡಿರುತ್ತಾರೆ. ಅಕ್ಕಮ್ಮ ಇವರ ಹೆಬ್ಬೆಟ್ಟಿನ ಸಹಿ ಮಾಡಿದ ನಂತರ ಸದರಿ ಮೃತ್ಯುಪತ್ರಕ್ಕೆ ನಾನು ಮತ್ತು ಸುನೀಲ್ ಇವರು ಶ್ರೀಮತಿ ಅಕ್ಕಮ್ಮರವರ ಸಮಕ್ಷಮ ಸಹಿ ಮಾಡಿರುತ್ತೇವೆ.

**<u>ಪಾಟೀ ಸವಾಲುಃ</u>** ನಿಪಿ-6 ನೋಟಿಸಿನ ಪ್ರಕಾರ ಯಾವುದೇ ಎದುರುದಾರರು ಹಾಜರಾಗದೇ ಇದ್ದ ಕಾರಣ ಸಾಕ್ಷಿಯ ಪಾಟೀ ಸವಾಲು ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

(ಕೆ. ಗುರುಪ್ರಸಾದ್)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.